<u>ದಿನಾಂಕಃ **11.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು</u>.

<u>ಮುಂದುವರೆದ ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ಶ್ರೀ.ಎಮ್ .ವಿ.ಆರ್ ವಕೀಲರಿಂದಃ</u>

ನೀವು ಕೊಟ್ಟಿರುವ ಒಪ್ಪಂದ ಕರಾರು ಪತ್ರ ಕೃಷ್ಣವೇಣಿಯ ಬಳಿ ಇಲ್ಲ ಎಂದರೆ ಸರಿ. ನನ್ನ ಬಳಿ ಮಾತ್ರ ಇರುವುದು. ನೀವು ಇರುವ ಮನೆಗೂ ಮತ್ತು ಪ್ರತಿವಾದಿ 1 ರವರು ವಾಸಿಸುವ ಮನೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಬಿ ಬಿ ಎಂ ಪಿಗೆ ಖಾತೆ ಆಗ ಬಾರದು ಎಂದು ಶಿವಲಿಂಗಂ ಅಂದರೆ ಪ್ರತಿವಾದಿ 1 ರವರ ವಿರುದ್ದ ಮಾತ್ರ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಇಬ್ಬರ ಮೇಲು ಕೊಟ್ಟಿದ್ದೇನೆ. ನಿಪಿ-13 ನೀವು ಬಿ ಬಿ ಎಂ ಪಿಗೆ ನೀಡಿರುವ ತಕರಾರು ಎಂದರೆ ಸರಿ. ದಿಃ30.03.2021 ರಲ್ಲಿ ಬಿ ಬಿ ಎಂ ಪಿಗೆ ನೀವು ಕೊಟ್ಟಿದ್ದೀರಾ ಎಂದರೆ ನಿರ್ದಿಷ್ಟವಾಗಿ ದಿನಾಂಕ ನನಗೆ ನೆನಪಿಲ್ಲ, ಆದರೆ ತಕರಾರನ್ನು ಕೊಟ್ಟಿದ್ದೇನೆ. ನಿಪಿ-13 ರಲ್ಲಿ ಪ್ರತಿವಾದಿ 1 ರವರ ಹೆಸರು ಮಾತ್ರ ಇದೆ ಬಾಲು ಅವರ ಹೆಂಡತಿ ಮತ್ತು ಮಗಳ ಹೆಸರು ಇಲ್ಲ ಎಂದು ಸಾಕ್ಷಿಗೆ ನಿಪಿ-13 ನ್ನು ತೋರಿಸಲಾಗಿ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಬಾಲುರವರ ಹೆಸರಿಗೆ ಖಾತೆ ಯಾವಾಗ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಬಾಲುರವರ ಖಾತೆ ಮಾಡಿಸಿಕೊಳ್ಳುವ ಕಾಲಕ್ಕೆ ನೀವು ಯಾವುದೆ ತಕರಾರು ಕೊಟ್ಟಿರಲ್ಲಿಲ್ಲ ಎಂದರೆ ಸರಿಯಲ್ಲ. ಬಾಲುರವರ ವಿರುಧ್ಧ ನೀಡಿದ್ದ ತಕರಾರಿನ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದೆ ಎಂದರೆ ಈಗ

ಕೊಡಲು ಆಗುವುದಿಲ್ಲ. ನಿಮ್ಮ ಬಳಿ ಆ ರೀತಿ ಯಾವುದೇ ದಾಖಲೆ ಇಲ್ಲ ನೀವು ಕೊಡಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಬಾಲುರವರ ಹೆಂಡತಿ ಪ್ರತಿವಾದಿ-2 ಶಶಿಕಲಾ ಮತ್ತು 3 ರವರು ನಿಮಗೆ ಮನೆ ಯಾವಾಗ ಖಾಲಿ ಮಾಡಬೇಕು ಎಂದು ಹೇಳಿದ್ದರು ಎಂದರೆ ಅವರು ಖಾಲಿ ಮಾಡಲು ಹೇಳಿಲ್ಲ. ಸಾಕ್ಷಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ಎಷ್ಟು ಮನೆಗಳು ಇವೆ ಎಂದರೆ 3 ಮನಗಳು ಇವೆ ಒಂದು ಪೋಟೊದಲ್ಲಿ ಕಾಣುತ್ತಿಲ್ಲ. ಕೆಳಗಡೆ ಒಂದು ಫ್ಯಾಕ್ಟರಿ ಇದೇಯೆ ಎಂದರೆ ಒಂದು ಫ್ಯಾಕ್ಟರಿ ಮತ್ತು ಒಂದು ಮನೆ ಇದೆ. ನಿಮಗೆ ಕೊಟ್ಟಿರುವ ಮನೆಯಲ್ಲಿ ಎಷ್ಟು ವರ್ಷಗಳಿಂದ ವಾಸವಿದ್ದೀರಿ ಎಂದರೆ 20 ವರ್ಷಗಳಿಂದ. ಅದಕ್ಕಿಂತ ಪೂರ್ವದಲ್ಲಿ ರಾಮಚಂದ್ರಪುರಂ ನಲ್ಲಿ ವಾಸವಿದ್ದೆ. ನೀವು ಮತ್ತು ಕೃಷ್ಣವೇಣಿ ಇಬ್ಬರೂ ನಿಮಗೆ ಬರಬೇಕಾಗಿದ್ದ ಭಾಗವನ್ನು ಪಡೆದುಕೊಂಡು ಸುಳ್ಳು ಕೇಸನ್ನು ದಾಖಲಿಸಿದ್ದೀರಾ ಎಂದರೆ ಸರಿಯಲ್ಲ. ಕೃಷ್ಣವೇಣಿ ರವರು ದಿಃ04.01.2017 ರಲ್ಲಿ ತೀರಿಕೊಂಡಿದ್ದರು ಎಂದರೆ ಸರಿ. ವಿಭಾಗ ಆಗಿದ್ದು 2010 ರಲ್ಲಿ ಎಂದರೆ ಸರಿ. ಕೃಷ್ಣವೇಣಿ ರವರಿಗೆ ಅವರ ಭಾಗ ಬಂದಿರುವುದರಿಂದ 7 ವರ್ಷದಗಳವರೆಗೂ ನೀವಾಗಲಿ, ಕೃಷ್ಣವೇಣಿ ಆಗಲಿ ಭಾಗ ಬರಬೇಕು ಎಂದು ಯಾವುದೇ ಕೇಸ ಹಾಕಿರಲಿಲ್ಲ ಎಂದರೆ ಅವರು ಕೊಡುತ್ತೇನೆ ಎಂದು ಹೇಳಿದ್ದರು ಅದಕ್ಕೆ ಹಾಕಿರಲಿಲ್ಲ. ಕೃಷ್ಣವೇಣಿ ರವರಿಗೆ ಅವರ ಭಾಗ ಹೋಗಿರುವುದರಿಂದ ಅವರು ಕೇಸ ಹಾಕಿರಲಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರ ದಲ್ಲಿರುವ ಅಂಶಗಳನ್ನು ನಿಮ್ಮ ವಕೀಲರು ನಿಮಗೆ

ಓದಿ ತಿಳಿಸಿದ್ದರಾ ಎಂದರೆ ಹೌದು. ವಿಭಾಗ ಪತ್ರದಲ್ಲಿ ನಿಮಗಾಗಲಿ ಅಥವಾ ಕೃಷ್ಣವೇಣಿ ಆಗಲಿ ತಲಾ ರೂ. 3 ಲಕ್ಷ ಹಣ ಕೊಡಬೇಕು ಎಂದು ಎಲ್ಲೂ ನಮೂದಾಗಿಲ್ಲ ಎಂದರೆ ಬರೆದಿದೆ ಎಂದು ನಮ್ಮ ವಕೀಲರು ಹೇಳಿದ್ದರು, ನನಗೆ ಗೊತ್ತಿಲ್ಲ. ಪ್ರತಿವಾದಿ 2 ಮತ್ತು 3 ರವರು ಮನೆ ಖಾಲಿ ಮಾಡಿ ನಮಗೆ ಬಿಟ್ಟು ಕೊಡಿ ಎಂದು ಕೇಳಿದ್ದ ಕಾರಣ ಈ ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ರಮೇಶ, ಲೋಕೇಶ್ವರಿ, ಹರೀಶ 3 ಜನರು ಕೃಷ್ಣವೇಣಿ ರವರ ಮಕ್ಕಳು, ನಿಮ್ಮ ಒತ್ತಾಯದಿಂದ ಅವರು ನಿಮಗೆ ದಾವೆ ಸಲ್ಲಿಸಲು ಹೇಳಿದ್ದರು ಎಂದರೆ ಸರಿಯಲ್ಲ. ರಮೇಶ, ಲೋಕೇಶ್ವರಿ, ಹರೀಶ ಈ 3 ಜನರನ್ನು ಸಾಕ್ಷಿಯಾಗಿ ನ್ಯಾಯಾಲಯದ ಹಾಜರು ಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ತೊಂದರೆ ಇದೆ. ಅವರೆಲ್ಲರೂ ಸಣ್ಣ ಮಕ್ಕಳು, ಅವರ ತಂದೆಯನ್ನು ನೋಡಿಕೊಳ್ಳಬೇಕು, ಒಬ್ಬಳು ಬಾಣಂತಿ. ಲೋಕೇಶ್ವರಿಗೆ ಈಗ 25 ವರ್ಷ ವಯಸ್ಸು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಹರೀಶ ಗೆ 24 ವಯಸ್ಸು ಎಂದರೆ 21 ವರ್ಷ. ನಿಪಿ-7 ಒಪ್ಪಂದ ಕರಾರು ಪತ್ರ ಕ್ಕೂ ಮತ್ತು ಪ್ರತಿವಾದಿಗಳಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೆ ಬರೆದುಕೊಟ್ಟಿದ್ದು. ನಿಪಿ-7 ದಾಖಲೆಯನ್ನು ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಉಪ-ನೊಂದಣಾಧಿಕಾರಿಗಳ ಕಚೆರಿಯಲ್ಲಿ ಮಾಡಿಸಿ ಬಾಲುರವರೆ ತಂದುಕೊಟ್ಟಿದ್ದರು. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ

ನಾನೆ ಸಹಿ ಮಾಡಿದ್ದೆ. ಎಲ್ಲಿ ಸಹಿ ಮಾಡಿದ್ದೀರಿ ಎಂದರೆ ನನಗೆ ನೆನಪಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳು ಏನಿದೆ ಎಂದು ನಿಮಗೆ ನಿಮ್ಮ ವಕೀಲರು ಓದಿ, ಹೇಳಿದ್ದರಾ ಎಂದರೆ ಇಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**